International Journal of Kannada Research
www.kannadajournal.com

ISSN: 2454–5813
IJKR 2024; 10(3): 32-36
© 2024 IJKR
www.kannadajournal.com
Received: 27-05-2024
Accepted: 30-06-2024

**ಪುಷ್ಪಲತಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕ
ವಿವೇಕಾನಂದ ಮಹಿಳಾ ಪದವಿ ಕಾಲೇಜು #16, 5ನೇ ಮುಖ್ಯ ರಸ್ತೆ, ಶ್ರೀಕಂಠೇಶ್ವರ ನಗರ ಮಹಾಲಕ್ಷ್ಮಿ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ

Corresponding Author:
**ಪುಷ್ಪಲತಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕ
ವಿವೇಕಾನಂದ ಮಹಿಳಾ ಪದವಿ ಕಾಲೇಜು #16, 5ನೇ ಮುಖ್ಯ ರಸ್ತೆ, ಶ್ರೀಕಂಠೇಶ್ವರ ನಗರ ಮಹಾಲಕ್ಷ್ಮಿ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ

# ಸ್ತ್ರೀಯರ ಮೇಲೆ ಜಾಗತೀಕರಣದ ಪ್ರಭಾವ

**ಪುಷ್ಪಲತಾ ಕೆ.ಪಿ**

**DOI:** https://doi.org/10.22271/24545813.2024.v10.i3a.985

**ಪೀಠಿಕೆ**

೧೯೯೦ರಿಂದ ಜಾಗತೀಕರಣ ವಿದ್ಯುಕ್ತವಾಗಿ ಆರಂಭವಾಯಿತು ಎಂದು ಗುರುತಿಸಲಾಗುತ್ತದೆ.ಅನಂತರದ ದಿನಗಳಲ್ಲಿ ಜಾಗತೀರಣದ ಸ್ವರೂಪ ಮೆಲ್ಲ ಮೆಲ್ಲನೆ ತನ್ನ ಬಣ್ಣ ಬಿಟ್ಟುಕೊಳ್ಳಲು ಶುರುವಾಯಿತು. ಜಾಗತೀಕರಣ ವೆಂಬುದು ಒಂದು ಮಾಯೆ.ಒಂದು ವ್ಯವಸ್ಥಿತವಾದ ವಿಸ್ಕೃತಿ,ಅಧಿಕಾರ ಕೇಂದ್ರಗಳ ಸ್ಥಾಪನೆ ಮತ್ತು ಅದರ ಭಾಗವಾದ ಮಾರುಕಟ್ಟೆ ಆರ್ಥಿಕತೆ ಇದರ ಬುನಾದಿ.ಕನ್ನಡದಲ್ಲಿ ಜಾಗತೀಕರಣದ ಪ್ರಭಾವ ಇದೆ. ಜಾಗತೀಕರಣ ವನ್ನು ಹೇಗೆ ಪರಿಭಾವಿಸುತ್ತಿದೆ. ಎಂಬ ಪ್ರಶ್ನೆಗೆ ಜಾಗತೀಕರಣವು ಇನ್ನೂ ಅದರಲ್ಲಿ ಹರಳು ಗಟ್ಟಿದಂತೆ ಕಾಣಿಸುತ್ತಿಲ್ಲ. ಎಂಬುದೇ ಉತ್ತರವಾಗಬಹುದು. ಜಾಗತೀಕರಣವೆಂಬುದು ವಿದ್ಯಮಾನವೋ ಅಥವಾ ಸಂವೇದನೆಯೋ ಎನ್ನುವ ಇಕ್ಕಟ್ಟಿನ ಪ್ರಶ್ನೆಗೆ ಸಿಕ್ಕಿ ಇನ್ನು ಉತ್ತರ ಕಂಡುಕೊಳ್ಳಲಾಗದೆ ಚಡಪಡಿಸುತ್ತಿರುವಂತೆ ಕಾಣುತ್ತಿದೆ. ಜಾಗತೀಕರಣ ವನ್ನು ಹೊಸ ವಸಾಹತುಶಾಹಿ ರೂಪ ಎಂಬ ಬಂಡವಾಳಶಾಹಿಯ ಹೊಸ ಅವತಾರವೆಂದೂ ಹೇಳಲಾಗುತ್ತದೆ. ಜಾಗತೀಕರಣ ಎನ್ನುವುದರ ದೇಶ ವ್ಯಾಪ್ತಿ ದೊಡ್ಡದು ಎಂಬ ಭಾವನೆಯಿಂದ ಕಿರಿದೆನ್ನಿಸುವ ಪ್ರಾದೇಶಿಕತೆಗಳನ್ನು ಮುಂದೆ ತರುವ ಪ್ರಯತ್ನಗಳೂ ಜಾಗತೀಕರಣದ ತಾತ್ವಿಕತೆಯಲ್ಲಿ ನಡೆಯುತ್ತಿದೆ, ಜಾಗತೀಕರಣವು ಸ್ತ್ರೀಯರ ಮೇಲೆ ಹೇಗೆ ನಾನಾ ರೀತಿಯಲ್ಲಿ ಪ್ರಭಾವ ಪ್ರೇರಣೆಯನ್ನು ಬೀರುತ್ತದೆ ಎಂಬುದನ್ನು ಈ ಕೆಳಗಿನಂತೆ ಲೇಖನದಲ್ಲಿ ತಿಳಿದುಕೊಳ್ಳಬಹುದು.

ಸ್ತ್ರೀವಾದದ ವಿಶಾಲ ಭಿತ್ತಿಯಲ್ಲಿ ಜಾಗತೀಕರಣದ ಪ್ರಶ್ನೆಯನ್ನು ಅಡಗಿಸಿಕೊಂಡಿರುವ ಮೂಲಕ ಮಹಿಳಾ ತಾತ್ವಿಕತೆಯ ಜಾಗತೀಕರಣಕ್ಕೆಪ್ರತಿಕ್ರಿಯೆನ್ನೇನೊ ತೋರಿದೆ. ಆದರೆ ಅದನ್ನು ತಾತ್ವಿಕಗೊಳಿಸಿ ಓದುವ ಅಥವಾ ಅದನ್ನು ಅನ್ವಯಿಸಿ ನೋಡುವ ದೃಷ್ಟಿಯು ಇನ್ನೂ ಬೆಳವಣಿಗೆಯಾಗ ಬೇಕಿದೆ.ಈಗಾಗಲೇ ಹೇಳಿದಂತೆ ಸಾರ್ವತ್ರಿ ಕವಾಗಿ ಬೆಳೆದ ಹೆಣ್ಣಿನ ತಾತ್ವಿಕತೆಯಲ್ಲಿ ಜಾಗತೀಕರಣವೂ ಸಹ ಅಡಕಗೊಳ್ಳುವುದರಿಂದ ಸಾಕಷ್ಟು ಪುನರಾ ವರ್ತನೆಗಳು ಕಾಣುತ್ತದೆ.ಒಟ್ಟಾರೆ ಕನ್ನಡದ ಸಂದರ್ಭದಲ್ಲಿ ಜಾಗತೀಕರಣವನ್ನು ಸಾಮಾನ್ಯ ಚರ್ಚೆಯಲ್ಲಿ ಎತ್ತಿಕೊಂಡವರ ಸಂಖ್ಯೆ ಹೆಚ್ಚು ಸಾಹಿತ್ಯ ವಿಮರ್ಶೆಯಲ್ಲಿ ಅಥವಾ ವೈಚಾರಿಕ

ಆಕೃತಿಗಳ ಹಿನ್ನೆಲೆಯಲ್ಲಿ ಅದನ್ನು ಗಂಭೀರವಾಗಿ ತೆಗೆದು ಕೊಂಡವರು ಎನ್ನಬಹುದು. ರಹಮತ್ ತರೀಕೆರೆಯವರ ಬರಹಗಳಲ್ಲಿ ಸಾಹಿತ್ಯದ ಮೇಲೆ ಜಾಗತೀಕರಣದ ಪ್ರಭಾವ ಪರಿಣಾಮವನ್ನು ಕುರಿತಾದ ಕೆಲವು ಒಳ ನೋಟಗಳಿವೆ.ಜಾಗತೀಕರಣವು ಬರೀ ಗುಮ್ಮವೋ ಅಥವಾ ಅದರಿಂದ ಏನಾದರೂ ದಕ್ಕಿದೆಯೋ ಎಂಬುವುದರ ಬಗ್ಗೆ ಅವರು ಅನೇಕ ಮಾಹಿತಿಗಳ ಮೂಲಕ ವಿಶ್ಲೇಷಿಸುತ್ತಾರೆ.ದೇಶಿಯತೆ ಮತ್ತು ಜಾಗತೀಕರಣವನ್ನು ಒಟ್ಟಂದದಲ್ಲಿ ಹಿಡಿಯುವ ಪ್ರಯತ್ನಗಳು ಸಹ ಕನ್ನಡದಲ್ಲಿ ನಡೆದಿವೆ. ರಾಜೇಂದ್ರ ಚೆನ್ನಿ ಸಿರಾಜ್ ಅಹಮದ್,ದಸ್ತಗೀರ್ ಸಾಬ್ ದಿನ್ನಿ ಮುಂತಾದವರು ಈ ದಿಸೆಯಲ್ಲಿ ಕೆಲಸ ಮಾಡಿದ್ದಾರೆ ಸ್ತ್ರೀ ಚಿಂತಕಿಯರ ಕೊರತೆ ಈ ವಿಷಯದಲ್ಲಿ ಎದ್ದು ಕಾಣುತ್ತದೆ. ಲೇಖನಗಳು ಅದರಲ್ಲೂ ಪತ್ರಿಕಾ ಲೇಖನಗಳು ಮತ್ತು ಕ್ರಿಯಾತ್ಮಕವಾಗಿ ಬಂದಿರುವ ಕೆಲವು ಬರಹಗಳು ಮಾತ್ರವೇ ಸ್ತ್ರೀ ಚಿಂತನೆಯು ಜಾಗತೀಕರಣದ ಚರ್ಚೆಯಲ್ಲಿ ತೊಡಗಿ ಸೀಮಿತ ಗೊಂಡಂತೆ ಕಾಣುತ್ತದೆ.

ಜಾಗತೀಕರಣದ ಬಗೆಗಿನ ದೃಷ್ಟಿಕೋನ ಜಾಗತೀಕ ಮಟ್ಟದಲ್ಲಿ ಎರಡು ಸ್ತರಗಳಲ್ಲಿ ವ್ಯಕ್ತವಾಗುತ್ತದೆ.ಜಾಗತೀಕರಣದ ಪ್ರಭಾವ ಪರಿಣಾಮಗಳು ಬೇರೆ ಬೇರೆ ಗುಂಪಿನ ಸ್ತ್ರೀಯರಿಗೆ ಬೇರೆ ಬೇರೆ ರೀತಿಯಲ್ಲಿ ಅನ್ವಯವಾಗುತ್ತದೆ. ಆದುದರಿಂದ ಎಲ್ಲಾ ಸ್ತ್ರೀಯರಿಗೂ ಅವರ ಪ್ರಭಾವ ಪರಿಣಾಮಗಳು ಹೀಗೆ ಎಂದು ಎತ್ತಿ ತೋರಿಸಲಾಗದು. ಜಾಗತೀಕರಣದ ಪರ ವಿರೋಧದ ಚರ್ಚೆಗಳನ್ನು ಜಾಗತಿಕ ಮಹಿಳಾ ವೇದಿಕೆಗಳು, ಮಹಿಳಾ ವಿದ್ವಾಂಸರು ಎತ್ತಿ ಕೊಂಡಿದ್ದಾರೆ.ಒಂದು ವಾದದ ಪ್ರಕಾರ ಜಾಗತೀಕರಣದಿಂದ ಸ್ತ್ರೀ ಜಾಗೃತಿ ಉಂಟಾಗಿದ್ದು ಪ್ರಗತಿಯ ಬಗ್ಗೆ ಆಲೋಚಿಸಲು ಹೊಸ ಅವಕಾಶ ಕೊಟ್ಟಿದೆ. ಮಹಿಳೆಯರಿಗೆ ಹೊರಗೆ ಬರುವ ಅವಕಾಶವನ್ನು ಜಾಗತೀಕರಣ ಹೊಸ ಉದ್ಯೋಗಾವಕಾಶಗಳ ಮೂಲಕ ಕೊಟ್ಟಿದೆ.ಆದರೆ ಇನ್ನೊಂದು ಗುಂಪಿನ ಪ್ರಕಾರ ಜಾಗತೀಕರಣದಿಂದ ಮಹಿಳಾ ಶೋಷಣೆ ಹೆಚ್ಚಾಗಿದ್ದು ಜಾಗತೀಕರಣದ ಜೊತೆಯಲ್ಲಿ ಬಂದ ಖಾಸಗೀಕರಣ, ಉದಾರೀಕರಣದ ನೀತಿಗಳಿಂದ ಅನೇಕ ಚಿಂತಕಿಯರು ಗುರುತಿಸುವಂತೆ ಅದರೊಳಗೆ ಸಾಕಷ್ಟು ಅಪಮಾನದ ಕತೆಗಳಿವೆ. ಜಾಗತೀಕರಣದ ಅವಕಾಶಗಳ ಬಗ್ಗೆ ಆಶಾವಾದಿಯಾಗಿ ನೋಡುವವರು ಅವು ಸರಿಯಾಗಿ ಸಮಾಜದಲ್ಲಿ ಹಂಚಿಕೆಯಾಗಿದೆಯೇ ಎಂಬುದರತ್ತ ಗಮನ ಹರಿಸ ಬೇಕಿದೆ ಎನ್ನುತ್ತಾರೆ. ಈ ಚಿಂತಕಿಯರು ವಂದನಾಶಿವ ತರದ ಚಿಂತಕಿಯರು ಪರಿಸರದ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ನೋಡುವಾಗ ಅದರ ಕುರೂಪಗಳೇ ಹೆಚ್ಚಾಗಿ ಕಾಣುತ್ತದೆ. ಅಭಿವೃದ್ಧಿ ಎಂಬ ರಾಜಕರಣದ ಪರಿಭಾಷೆ ನಮ್ಮ ನಡುವೆ ಸಂಗ್ರಹದ ಅತಿ ದಾಹವನ್ನು ಭೂಕಬಳಿಕೆಯ ದುರಾಸೆಯನ್ನು ಹುಟ್ಟು ಹಾಕಿದೆ.ರೈತಾಪಿ ಎನ್ನುವ ಜೀವನ ಕ್ರಮದ ನಾಶ ಮತ್ತು ಸರಪಳಿಯ ಏರುಪೇರು.ಇವೆಲ್ಲವೂ ಜಾಗತೀಕರಣದ ಪ್ರಭಾವದಿಂದ ಉಂಟಾದವು.ಇದನ್ನು ತಾತ್ವಿಕವಾಗಿ ನಿರೂಪಿಸುತ್ತಿರುವ ಚಿಂತಕರಲ್ಲಿ ವಂದನಾಶಿವ ಮತ್ತು ಮೇದಾ ಪಾಟ್ಕರ್ ಇವರು ಮುಖ್ಯರಾಗುತ್ತಾರೆ.ವಂದನಾ ಶಿವ ಅವರ "ಸ್ಟೇಯಿಗ್ ಅಲೈವ್" ಎನ್ನುವ ಪುಸ್ತಕ ಕನ್ನಡಕ್ಕೆ 'ಬತ್ತದ ಚಿಲುಮೆ'(ಅನು: ಮಾಧವ ಐತಾಳ್ ಕನ್ನಡ ವಿ.ವಿ ಪ್ರಸಾರಾಂಗ-೨೦೦೫) ಎನ್ನುವ ಹೆಸರಲ್ಲಿ ಬಂದಿದೆ. ಜಾಗತೀಕರಣದ ಬಗ್ಗೆ ದನಿಯೆತ್ತಿ ಮಹಿಳಾ ಕ್ರಿಯಾವಾದದ ಜೊತೆಗೆ ನಿರೂಪಿಸುತ್ತಿರುವ ಸ್ತ್ರೀಯರ ಗುಂಪುಗಳೇ ಇವೆ. ಇವರ ಚಿಂತನೆಗಳು ಕೂಲಂಕಷವಾಗಿ ಜಾಗತೀಕರಣವನ್ನು ಪರಿಶೀಲಿಸುತ್ತದೆ.

ಜಾಗತೀಕರಣವು ಅಭಿವೃದ್ಧಿ ಮತ್ತು ಸಮೃದ್ಧಿಯ ಮೇಲೆ ಕಣ್ಣು ನೆಟ್ಟಿರುವುದರಿಂದ ಅದರ ಗುರಿ ಲಾಭವೇ ಆಗಿರುತ್ತದೆ. ಆದರೆ ಈ ಧೋರಣೆಯು ಸ್ತ್ರೀಯರ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನುಂಟು ಮಾಡುತ್ತದೆ.ಏಕೆಂದರೆ ನಾಗರಿಕತೆಯ ಬೆಳವಣಿಗೆಯಲ್ಲಿ ಸರಕು ಸಂಸ್ಕೃತಿಯನ್ನು ಸ್ತ್ರೀಯರ ಮೇಲೆಯೇ ಕಟ್ಟಿಕೊಂಡು ಬರಲಾಗುತ್ತಿದೆ.ಏಕೆಂದರೆ ನಾಗರೀ ಕತೆಯ ಬೆಳವಣಿಗೆಯಲ್ಲಿ ಸರಕು ಸಂಸ್ಕೃತಿಯನ್ನು ಮಹಿಳೆಯರ ಮೇಲೇಯೇ ಕಟ್ಟಿಕೊಂಡು ಬರಲಾಗುತ್ತಿದೆ. ಸ್ತ್ರೀಯರನ್ನು ಸರಕೆಂದು ಭಾವಿಸುವ ಮೂಲಕ ಅವಳನ್ನು ವಸ್ತುವಾಗಿ ನೋಡುತ್ತ ಅನುಭೋಗಕ್ಕೆ ಈಡು ಮಾಡಿ ಕೊಂಡಿರುವುದನ್ನು ಚರಿತ್ರೆಯಲ್ಲಿ ಗಮನಿಸಬಹುದು. ಬಂಡವಾಳಶಾಹಿ ವ್ಯವಸ್ಥೆಯನ್ನು ಪೋಷಿಸುವ ಜಾಗತೀಕರಣ ದಲ್ಲಿ,ಮಹಿಳೆಯರನ್ನು ಸರಕನ್ನಾಗಿ ನೋಡುವುದರ ಜೊತೆ ಅವರನ್ನು ಕಡಿಮೆ ದರದ ಕೂಲಿಯಾಳುಗಳನ್ನಾಗಿ ನೋಡುತ್ತದೆ.ಹೀಗಾಗಿ ಮಹಿಳೆ ಜಾಗತೀಕರಣದ ಸಂದರ್ಭದಲ್ಲಿ ಇನ್ನಷ್ಟು ಸರಕಾಗಿ ಭೋಗ ವಸ್ತುವಾಗಿ ಕಾಣುವು ದರ ಜೊತೆಗೆ ಕಡಿಮೆ ವೇತನದ ಶೋಷಣೆಗೆ ಈಡಾಗುತಿದ್ದಾಳೆ.

ಜಾಗತೀಕರಣದ ಪರಿಣಾಮವು ಸಾಮಾಜೀಕತೆ,ಆರ್ಥಿಕತೆ ಮಾತ್ರವಲ್ಲ ಅದು ದೂರಗಾಮಿಯಾದ ಪರಿಣಾಮ ವಾಗಿದ್ದು ಕೋಮುವಾದ,ಮೂಲಭೂತವಾದದಂತಹ ಸಮಸ್ಯೆಗಳ

ಉಲ್ಬಣವನ್ನು ಇದರ ಹಿನ್ನೆಲೆಯಲ್ಲಿ ಕಾಣಬಹುದು. ಸಾಮಾಜಿಕ ಸಂಬಂಧಗಳಲ್ಲಿ ಅಸ್ಥಿರತೆ,ಕುಟುಂಬ ಸ್ಥಿತಿಯ ಪಲ್ಲಟಗಳು ಜಾಗತೀಕರಣದಿಂದ ಉಂಟಾದವು ಎನ್ನುವುದಕ್ಕಿಂತ ಈ ಕಾಲದಲ್ಲಿ ಹೆಚ್ಚಾಯಿತು ಎನ್ನಬಹುದೇನೋ ಕೋಮುವಾದದ ಪ್ರತಿಕೂಲ ಪರಿಣಾಮಗಳನ್ನು ಉದಾರವಾದಿ ನೆಲೆಯಲ್ಲಿ ಸಾಮರಸ್ಯವನ್ನು ಒಪ್ಪಿಕೊಂಡ ಮಾದರಿ ಒಂದು ಬಗೆಯದು.ರಾಷ್ಟ್ರೀಯತಾ ಆಂದೋಲನ ದಲ್ಲಿ ಇದನ್ನು ಕಾಣಬಹುದು. ಆದರೆ ಜಾಗತೀಕರಣದ ಹಿನ್ನೆಲೆಯಲ್ಲಿ ಕೋಮುವಾದವು ಹಿಂಸಾತ್ಮಕವಾಗಿ ಪರಿಣಮಿ ಸಿದೆ. ಆರ್ಥಿಕ ಪಲ್ಲಟಗಳಿಂದ ಉಂಟಾದ ಋಣಾತ್ಮಕ ಚಿಂತನೆಗಳಿಗೆ ಮೂಲಭೂತವಾದವು ಒಂದು ಬಿಡುಗಡೆ ಯನ್ನು ಒದಗಿಸಿದಂತಾಗಿ,ಬಂಡವಾಳಶಾಹಿಯ ಎದುರು ಅತೀ ಧಾರ್ಮಿಕರಾಗುವ ಉಪಾಯವನ್ನು ತನ್ನಿಂತಾತೇ ಕಂಡು ಕೊಂಡಂತಾಯಿತು.ಈ ದಿಸೆಯಲ್ಲಿ ಸಾರಾ ಅಬೂಬಕರ್‌ಅವರ ಅಂಕಣಬರಹಗಳಲ್ಲಿ ದಕ್ಷಿಣ ಕನ್ನಡದ ಮೂಲಭೂತ ವಾದ ಮತ್ತು ಕೋಮುವಾದಗಳನ್ನು ಕುರಿತಾದ ಲಘು ಚರ್ಚೆಇದೆ.ಷರೀಪ,ಶಹನಾಜ್ ಮುಂತಾದವರ ಕೆಲವು ಪತ್ರಿಕಾ ಬರಹಗಳಲ್ಲಿ ಕೋಮುವಾದದ ಪ್ರಸ್ತಾಪ ಇದೆ.ಪತ್ರಿಕಾ ಸಂಪಾದಕಿಯಾಗಿ ಗೌರಿ ಲಂಕೇಶ್ ಬರೆದಿರುವ ಸಂಪಾದ ಕೀಯಗಳಲ್ಲಿ ಅನೇಕವು ಕೋಮುವಾದದ ವಿರುದ್ಧ ಇವೆ. ಮಹಿಳಾ ದೃಷ್ಟಿಕೋನದಿಂದ ಮಾನವೀಯ ದೃಷ್ಟಿಯಿಂದ ಕೋಮುವಾದವನ್ನು ಎದುರಿಸುವ ರೀತಿಯನ್ನು ಅವರ ಬರಹಗಳಲ್ಲಿ ಕಾಣಬಹುದು. ಶೈಲಜಾ ಅವರ "ಜಾಗತೀಕರಣ ಹಾಗೂ ಮಹಿಳಾ ಚಳುವಳಿ" ಎಂಬ ಲೇಖನ ಮಹಿಳಾ ಚಳುವಳಿಯ ಹಿನ್ನೆಲೆಯಲ್ಲಿ ಜಾಗತೀಕರಣವನ್ನಿಟ್ಟು ನೋಡುವ ಪ್ರಯತ್ನ ಎಂದು ಇದೇ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಇದಕ್ಕಿಂತ ಭಿನ್ನವಾಗಿ ಜಾಗತೀಕರಣದ ಸನ್ನಿವೇಶ ಸ್ತ್ರೀಯರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದೆ. ಮಹಿಳಾ ಶೋಷಣೆಗೆ ಸಾಂಕೇತಿಕವಾಗಿ ಮಾಧ್ಯಮಗಳು ಮಹಿಳೆಯನ್ನು ಚಿತ್ರಿಸುವ ಕ್ರಮವನ್ನು ಗಮನಿಸಬೇಕು. ಯಾವ ರೀತಿ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಸ್ತ್ರೀಯರನ್ನು ಲೈಂಗಿಕ ವಸ್ತುವಾಗಿ ನೋಡಲಾಗಿದೆಯೋ ಜಾಗತೀಕರಣದ ಉದ್ಯಮಶಾಹಿಗಳು ಸಹ ಹಾಗೆಯೇ ಪರಿಗಣಿಸಿದ್ದಾರೆ. ಯಾವುದೋ ಮೋಟರು ಸೈಕಲ್ ಜಾಹೀರಾತಿನಲ್ಲಿ ಕಂಡು ಬರುವ ಮಹಿಳೆಯ ಸ್ಥಿತಿ ಅತ್ಯಂತ ಹೀನವಾದುದು.ಅಸ್ಪಷ್ಟವಾಗಿ ಮಹಿಳೆಯನ್ನು ನಗ್ನ ಸ್ಥಿತಿಯಲ್ಲಿ ಚಿತ್ರಿಸಲಾಗಿದ್ದು. ಆಕೆಯ ಮೇಲೆ ಏರಿ ಹೋಗುವ ಪುರುಷನನ್ನು ಕಂಡರಿಸಲಾಗಿದೆ.ಕ್ರಮೇಣ ಸ್ತ್ರೀಯರ ಶರೀರ ಮಾಯವಾಗುತ್ತ ಆಗುತ್ತ ಆ ಸ್ಥಳದಲ್ಲಿ ಮೋಟಾರು ಸೈಕಲು ಪ್ರತ್ಯಕ್ಷವಾಗಿ ಸ್ಪಷ್ಟವಾಗುತ್ತದೆ.ವಸ್ತ್ರ ಧರಿಸಿದ ಪುರುಷ ಮೋಟಾರು ಸೈಕಲಿನ ಮೇಲೆ ಸವಾರಿ ಮಾಡುತ್ತ ಹೋಗುತ್ತಾನೆ.ಇದು ಕೊಡುವ ಸಂದೇಶವೇನೆಂದು ಬೇರೆ ಹೇಳ ಬೇಕಾಗಿಲ್ಲ. ಹಾಗೆಯೇ ಈ ತೆರನಾಗಿ ಕಾಣಿಸುವ ನಗ್ನ ಸ್ಥಿತಿಯ ಸ್ತ್ರೀ ಪುರುಷರ ಚಿತ್ರಣಗಳಿಗೆ ಕೊರತೆಯಿಲ್ಲ. ಇತ್ತೀಚೆಗೆ ಪ್ರಾನ್ಸ್ ನಲ್ಲೋ ಜರ್ಮನಿಯಲ್ಲೋ ಇರಬೇಕು ವಿಚಿತ್ರವಾದ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿತ್ತು. ನೀರಿನಲ್ಲಿ ಮುಳುಗಿ ಹೆಚ್ಚು ಹೊತ್ತು ಮುದ್ದಾಡುವ ಪ್ರೇಮಿಗಳನ್ನು ಪತ್ತೆ ಮಾಡಿ ಅವರಿಗೆ ಬಹುಮಾನ ಕೊಡುವ ಸ್ಪರ್ಧೆ..! ಇದೇ ರೀತಿ ಮುಂದುವರಿದರೆ ಮುಂದಿನ ಹತ್ತು ಹದಿನೈದು ವರ್ಷಗಳಲ್ಲಿ ಅತಿ ಹೆಚ್ಚು ಕಾಲ ಸಮಾಗಮ ನಡೆಸುವ ಸ್ಪರ್ಧೆಯನ್ನು ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ.ಆದರೆ ಅದನ್ನು ಸಾರ್ವಜನಿಕ ಗೊಳಿಸುವುದಕ್ಕೆ ನನ್ನ ಆಕ್ಷೇಪ ವಿದೆ.ಕೆಲವು ಸಂಗತಿಗಳು ಸಾರ್ವಜನಿಕ ಗೊಳಿಸುವಂತಂಥವಲ್ಲ,ಗೊಳಿಸಲುಬಾರದು.ಅವು ಸಾರ್ವಜನಿಕವಾಗುತ್ತ ಹೋದ ಹಾಗೆ ಅವಕ್ಕಿರುವ ಪಾವಿತ್ರುವ ಕಳೆದು ಹೋಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಈ ರೀತಿಯಾಗಿ ಮಹಿಳೆಯರನ್ನು ಲೈಂಗಿಕ ಸಾಧನವಾಗಿ ಪರಿಗಣಿಸುವ ಜಾಗತೀಕರಣ ಸನ್ನಿವೇಶಕ್ಕಿರುವುದು ವ್ಯಾಪಾರಿ ಉದ್ದೇಶವಲ್ಲದೆ ಬೇರೆಯಲ್ಲ.ಅದರೆ ವ್ಯಾಪಾರ ಮಾಡುವುದಕ್ಕೆ ಮಹಿಳೆ ಒಂದು ಸರಕಲ್ಲ ಎನ್ನುವುದು ಉದ್ಯಮಪತಿಗಳಿಗೆ ಅರ್ಥವಾಗುವುದಿಲ್ಲ.ಅಷ್ಟರ ಮಟ್ಟಿಗೆ ಹಣದ ದುರಾಸೆಯ ಪೊರೆ ಅವರನ್ನು ಆವರಿಸಿದೆ. ಆದರೆ ಭಾರತೀಯ ಸಂದರ್ಭದಲ್ಲಿ ಮಹಿಳೆಯನ್ನು ಈ ರೀತಿಯ ಶೋಷಣೆಗೆ ಒಳ ಪಡಿಸಲು ಅನುಕೂಲಕರವಾದ ಸನ್ನಿ ವೇಶಗಳು ಇಲ್ಲಿವೆ.

ಮೊದಲನೆಯದಾಗಿ ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಮಹಿಳೆಗೆ ಸ್ವಾತಂತ್ರ್ಯವಿಲ್ಲ. ಆ ಮನೋಭಾವವನ್ನು ಕಳಚಿಕೊಳ್ಳುವ ಭಾರತೀಯ ಸಮಾಜ ಮಹಿಳೆಯರನ್ನು ಬಹು ಮಟ್ಟಿಗೆ ಒಂದು ರೀತಿಯ ಬಂಧನದಲ್ಲಿ ಇರಿಸಿದೆ. ಅಂಥಲ್ಲಿ ಜಾಗತೀಕರಣದ ಅಧೈರ್ಯಗಳು ಮಹಿಳಾ ಸ್ವಾತಂತ್ರವನ್ನು ತೆರೆದಿಡುತಿದ್ದಾರೆ. ಸ್ತ್ರೀ ಸ್ವಾತಂತ್ರದ ತಪ್ಪನ್ನೇ ಆಧರಿಸಿ ಮಹಿಳಾ ಶೋಷಣೆ ಎಸಗುತ್ತಾರೆ. ಹೀಗಿರುವಾಗ ಜಾಗತೀಕರಣ ಕೊಡುವ ವ್ಯಕ್ತಿ ಸ್ವಾತಂತ್ರದ ಆಕರ್ಷಣೆಗೆ ಸೆಳೆಯಲ್ಪಟ್ಟು ಅಲ್ಲಿ ನಡೆಯುವ

ಶೋಷಣೆ ಗಮನಕ್ಕೆ ಬಾರದಿರಲು ಸಾಧ್ಯವಿದೆ. ಮತ್ತು ಸಾಂಪ್ರದಾಯಿಕ ಶೋಷಣೆ ಯಿಂದ ಕಳಚಿಕೊಳ್ಳುವ ಧಾವಂತದಲ್ಲಿ ಜಾಗತೀಕರಣದ ಶೋಷಣೆಗೆ ಬಲಿಯಾಗಲು ಸಾಧ್ಯವಿದೆ.

ಎರಡನೆಯದಾಗಿ ಜಾಗತೀಕರಣ ಯಾವುದಕ್ಕೆ ಪ್ರಾಮುಖ್ಯತೆ ಕೊಡುತ್ತಿದೆ ಎನ್ನುವುದು. ಅದು ಮನುಷ್ಯನ ಬಹಿರಂಗದ ಸುಖಕ್ಕೆ ಆದ್ಯತೆ ಕೊಡುತ್ತಿದೆ. ಆದರೆ ಎಲ್ಲಾ ವಿಕೃತಿಗಳನ್ನು ಹೊರಗಿರಿಸಿ ಹೇಳುವುದಾದರೆ, ಭಾರತದ ತಾತ್ವಿಕ ಮನೋಧರ್ಮ ಅಂತರಂಗದ ಸೌಖ್ಯಕ್ಕೆ ಪ್ರಾಶಸ್ತ್ಯ ಕೊಡುತ್ತದೆ. ಬಹಿರಂಗದ ಸುಖ ಜೀವಿಗಳ ಸಹಜ ಸಂವೇದನೆಗಳನ್ನು ಆಧರಿಸಿರುವಂಥದಾಗಿದ್ದು ಬಹು ಸುಲಭದಲ್ಲಿ ಅದರತ್ತ ಆಕರ್ಷಣೆ ಬೆಳೆಯುತ್ತದೆ.ಅಂತರಂಗದ ಸೌಖ್ಯ ಸತತ ಸಾಧನಾ ಶೀಲತೆಯನ್ನು ಆಧರಿಸಿದ್ದು ಅದು ಬಹುವಾಗಿ ಸಹಜ ಸಂವೇದನೆಗಳನ್ನು ಮೀರುವ ಶಕ್ತಿಯನ್ನು ಬೇಡುತ್ತದೆ.ಆದ್ದರಿಂದಲೇ ಜಾಗತೀಕರಣ ತರುತ್ತಿರುವ ಪ್ಯಾಷನ್ ಸಂಸ್ಕೃತಿ ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ಪ್ರಬಲ ಆರ್ಥಿಕ ಶಕ್ತಿ ಅವರ ಗುತ್ತಿಗೆ ಹಿಡಿದಾಗ ವ್ಯಭಿಚಾರವೂ ಸಹ ಶ್ರೇಷ್ಠತೆಯು ಮಾನ ದಂಡವಾಗುತ್ತದೆ. ಎನ್ನುವುದಕ್ಕೆ ಹೈಟೆಕ್ ವೇಶ್ಯಾವಾಟಿಕೆಯಲ್ಲಿ ನಿರತರಾಗಿರುವಂತಹವರು ನಾಯಕ ಮಣಿಗಳಾಗಿ ವಿಜೃಂಬಿಸುತ್ತಿರುವುದೇ ಸಾಕ್ಷಿ. ದುರಂತವೇನೆಂದರೆ ಹೈಟೆಕ್ ವೇಶ್ಯಾವಾಟಿಕೆಯನ್ನು ಒಪ್ಪಿಕೊಳ್ಳುವ ಜನರು ಬದುಕುವ ಅನಿವಾರ್ಯತೆಗಾಗಿ ಬೇರೆ ದಾರಿಯಿಲ್ಲದೆ ತನ್ನನ್ನು ತಾನು ಮಾರಿಕೊಳ್ಳುವ ನಿರ್ಗತಿಕ ವೇಶ್ಯಯ ಸಂಸ್ಕೃತಿ ಹಾಳಾಗುತ್ತಿದೆ ಎನ್ನುವುದು ನಿರ್ಗತಿಕ ವೇಶ್ಯೆಯ ಇರುವಿಕೆ. ಆಕೆಯನ್ನು ರಕ್ಷಿಸಲಾಗದ ಈ ಸಮಾಜದ ದೌರ್ಬಲ್ಯದ ಸಂಕೇತವೇ ಹೊರತು ಅದು ಆಕೆಯ ತಪ್ಪಲ್ಲ ಎನ್ನುವುದನ್ನು ಎಲ್ಲರೂ ಗಮನಿಸಬೇಕು.

ಮೂರನೆಯದಾಗಿ ಜಾಗತೀಕರಣ ಮಹಿಳೆಯನ್ನು ಶೋಷಣೆ ಗೊಳಪಡಿಸಿವಾಗ ಹಣ ಕೊಡುತ್ತದೆ.ನಮ್ಮ ದೇಶದಲ್ಲಿ ನಿರ್ಗತಿಕ ಮಹಿಳೆಯರು ದೊಡ್ಡ ಸಮಖ್ಯೆಯಲ್ಲಿದ್ದಾರೆ. ಅವರನ್ನು ಬಹು ಸುಲಬದಲ್ಲಿ ಶೋಷಣೆಗೆ ಒಳಪಡಿಸಲು ಸಾಧ್ಯವಿದೆ.ಬ್ಲೂ ಪಿಲಂನಂಥದಂದೆಗೆ ಇವರನ್ನೇ ಒಳಪಡಿಸಲಾಗುತ್ತಿದೆ. ಹಾಗೇ ದಿನೇ ಹೆಚ್ಚುತ್ತಿರುವ ಫ್ಯಾಷನ್ ನಡೆಗೆ ಬಾಲಕಿಯರು ಆಕರ್ಷಿತರಾಗುವುದು ಸಹಜ. ಅಂಥದರಲ್ಲಿ ಅವರ ಆಸೆಯನ್ನು ಪೂರೈಸಲಾಗದ ಪಾಲಕರು ಇರುವಲ್ಲಿ ಅವರನ್ನು ಸೆಳೆಯುವುದು ಸುಲಭ ಅಲ್ಲದೆ ಬಾಲಕಿಯರನ್ನು ದಂಧೆಗೆ ಹಚ್ಚುವ ಮಂದಿ ಅವರನ್ನು ಬಹಳವಾಗಿ ಪ್ರೀತಿಸುವಂತೆ ನಾಟಕವಾಡುತ್ತಾರೆ. ಪ್ರೀತಿಗೆ ಬಾಲಕಿಯರು ಸುಲಭದಲ್ಲಿ ಬಲಿಯಾಗುತ್ತಾರೆ. ಯಾಕೆಂದರೆ ಹೆಣ್ಣು ಮಗುವಿನ ಬಗ್ಗೆ ತಿರಸ್ಕಾರವಿರುವ ಭಾರತೀಯ ಸಮಾಜದಲ್ಲಿ ಬಾಲಕಿಯರು ಪಾಲಕರ ಪ್ರೀತಿಯಿಂದ ವಂಚಿತ ರಾಗಿದ್ದಾರೆ.

ನಾಲ್ಕನೆಯದಾಗಿ ಮೇಲು ವರ್ಗವನ್ನು ಕೆಳವರ್ಗ ಅನುಸರಿಸುವುದು ಒಂದು ರೀತಿಯ ಭ್ರಮಾತ್ಮಕ ಸಹಜ ಸ್ಥಿತಿ ಅಂಥದರಲ್ಲಿ ಪಶ್ಚಿಮದ ಮೇಲು ವರ್ಗವನ್ನು ಭಾರತದ ಕೆಳವರ್ಗ ಅನುಕರಣೆ ಮಾಡುವಲ್ಲಿ ಈ ರೀತಿಯ ಶೋಷಣೆ ನಡೆಯಲು ಸಾಧ್ಯವಿದೆ. ಅದರದು ಪಾಶ್ಚಿಮಾತ್ಯ ಸಮಾಜಕ್ಕೆ ಶೋಷಣೆ ಎನಿಸಿಕೊಳ್ಳ ಬೇಕಿಲ್ಲ ಅದರಲ್ಲಿ ಸರಿ ತಪ್ಪಿನ ಪ್ರಶ್ನೆಯಿಲ್ಲ. ಪಶ್ಚಿಮದ ಸಾಮಾಜಿಕ ಮನೋಧರ್ಮ ಇದನ್ನೆಲ್ಲ ಭರಿಸಿಕೊಳ್ಳುತ್ತದೆ. ಆದರೆ ಭಾರತೀಯ ಸಮಾಜ ಭರಿಸಿಕೊಳ್ಳಲಾರದು. ತತ್ಪರಿಣಾಮವಾಗಿ ಯೌವ್ವನವನ್ನು ಹಿತವಾಗಿ ಕಳೆಯಬಲ್ಲ ಮಹಿಳೆಯರು ಮಧ್ಯ ಮತ್ತು ಇಳಿ ವಯಸ್ಸಿನಲ್ಲಿ ತಿರಸ್ಕೃತರಾಗುವ ಸಾಧ್ಯತೆ ಇದೆ.ಅನುಕರಣೆ ಸಲ್ಲ ಎನ್ನುವುದು ಭೌದ್ಧಿಕ ಮಟ್ಟದಲ್ಲಿ ಅರ್ಥವಾಗಿದೆ. ಆದರದು ಜನ ಸಾಮಾನ್ಯರ ಮಟ್ಟಕ್ಕೆ ಇಳಿಯಬೇಕಲ್ಲ ಅದು ಜರೂರಾಗಿ ಆಗಬೇಕಾದ ಕೆಲಸ.

ಕೊನೆಯದಾಗಿ ನಮ್ಮ ಮುಂದಿರುವ ಗಂಭೀರ ಸಮಸ್ಯೆ ಮತೀಯವಾದ ಹೆಣ್ಣು ಮಕ್ಕಳ ಧಿರಿಸು,ಬೊಟ್ಟು, ಉಂಗುರ, ಸರ,ಇತ್ಯಾದಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಹಿಂದೂ ಮತೀಯವಾದಿಗಳು,ಮಹಿಳೆಯರು ಬುರ್ಕ ಧರಿಸದಿದ್ದರೆ ಆಸಿಢ್ ಎರಚುವ ಮುಸ್ಲಿಂ ಮತೀಯವಾದಿಗಳು ಮಹಿಳಾ ಸಮುದಾಯದಲ್ಲಿ ಒಂದು ರೀತಿಯ ಭೀತಿಯನ್ನು ಸೃಷ್ಟಿಸಿ ಬಿಡುತಿದ್ದಾರೆ.ಇದರಿಂದ ತಪ್ಪಿಸಿ ಕೊಳ್ಳುವ ಉಪಾಯಕ್ಕಾಗಿ ಅವರ ಜಾಗತೀಕರಣದತ್ತ ಸೆಳೆಯಲ್ಪಟ್ಟರೆ ಆಶ್ಚರ್ಯವಿಲ್ಲ ಯಾಕೆಂದರೆ ಜಾಗತೀರಣ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುತ್ತದೆ.ಆದರೂ ಶೋಷಿಸುತ್ತದೆ.

ಜಾಗತಿಕರಣದ ದೆಸೆಯಿಂದ ಮಹಿಳೆಯರು ವರ್ಗದ ಆಧಾರದಲ್ಲಿ ವಿಭಜಿತರಾಗುತ್ತಾರೆ.ಜಾಗತೀಕರಣವು ಮಹಿಳೆಯರನ್ನು ವಿಭಜಿಸಿಕೊಳ್ಳುವುದು ತನ್ನ ಅನುಕೂಲಕ್ಕಾಗಿ ಅಂದರೆ ಲಾಭವೇ ಮುಖ್ಯವಾದ ದೃಷ್ಟಿಯುಳ್ಳ ಜಾಗತೀಕರಣಕ್ಕೆ ಯಾವ ಯಾವ ವರ್ಗದ ಮಹಿಳೆ ತನಗೆ

ಸರಕಾಗಬಲ್ಲಳು,ಗ್ರಾಹಕಳಾಗಬಲ್ಲಳು ಎನ್ನುವುದನ್ನು ಅದು ನೋಡ ಬಯಸುತ್ತದೆ..ಹೀಗಾಗಿ ಮಹಿಳಾ ಸಂಕುಲ ಎನ್ನುವುದು ಈ ಹಿನ್ನೆಲೆಯಲ್ಲಿ ಏಕ ರೂಪಿಯಾದ ಸಂಗತಿಯಲ್ಲ ಇದರೊಂದಿಗೆ ಜಾಗತೀಕರಣ ಎನ್ನುವುದು ವರ್ಗ ಸಂವೇದಿಯಾದ ಕೆಲವು ನಿರ್ವಚನಗಳನ್ನು ಬಯಸುತ್ತದೆ ಎನ್ನಬಹುದು. ಈ ನಿಟ್ಟಿನಲ್ಲಿ ಭೌಗೋಳೀಕರಣದ ಸಂದರ್ಭವನ್ನು ಹೀಗೆ ಬೇಕಾದಂತೆ ನಿರ್ವಚಿಸಿ ಕೊಳ್ಳಬಹುದಾಗಿದ್ದು ಮಹಿಳಾ ಪ್ರತಿ ಕ್ರಿಯೆಯು ಸಹ ಅದರಂತೆ ವಿಭಿನ್ನವಾಗಿದೆ. ಅವನ್ನು ಸ್ಥೂಲವಾಗಿ ಹೀಗೆಂದು ವರ್ಗೀಕರಿಸಿಕೊಳ್ಳ ಬಹುದು.

- ಜಾಗತೀಕರಣದ ಬಗ್ಗೆ ಅದರ ಸಾಮಾನ್ಯ ಅನುಭವಗಳನ್ನು ಕುರಿತು ಮಾತನಾಡುವುದು.ಇದರಲ್ಲಿ ಮಹಿಳೆಯರನ್ನು ಸಹ ಜಾಗತೀಕರಣದ ಒಟ್ಟು ಪರಿಣಾಮದಲ್ಲಿ ಸೇರಿಸಿ ಮಾತನಾಡುವುದು.
- ಜಾಗತೀಕರಣ ಕೆಲವು ಪ್ರಭಾವ,ಪರಿಣಾಮಗಳನ್ನು ಕುರಿತು ಮಾತನಾಡುವುದು ಅಂದರೆ ಒಂದು ಸೂಕ್ಷ್ಮ ಅಧ್ಯಯನದ ಮಾದರಿಯಲ್ಲಿ ಕೆಲವು ವಿಷಯದಗಳನ್ನು ಚರ್ಚಿಸುವುದು ಉದಾಹರಣೆಗೆ ಕೋಮುವಾದ, ಭಯೋತ್ಪಾದನೆ, ಸರಕು ಸಂಸ್ಕೃತಿ,ಮೌಲ್ಯಪಲ್ಲಟ,ಸಾಮಾಜಿಕ ಪಲ್ಲಟಗಳು ಇತ್ಯಾದಿ.
- ಜಾಗತೀಕರಣದ ರೈತ ವಿರೋಧಿ ನಿಲುವುಗಳನ್ನು ಎತ್ತಿಕೊಳ್ಳುವಂತದ್ದು.
- ಬಂಡವಾಳ ಶಾಹಿ ಅನುಸರಣಾ ನೀತಿಯನ್ನು ಎದುರಿಸುವುದು.

ಒಟ್ಟಾಗಿ ಹೇಳ ಬೇಕೆಂದರೆ ಜಾಗತೀಕರಣ ಆರ್ಥಿಕ ಪ್ರಕ್ರಿಯೆ, ಚಲನ ವಲನಗಳು ಪ್ಯಾರಾಡಾಕ್ಸಿಕಲ್ ಹಾಗೂ ವಿರೋಧಾಭಾಸ ಹೊಂದಿದ ತಕ್ಕಂತಹ ಅನುಭವಗಳನ್ನು ಒಟ್ಟಾಗಿ ಸ್ತ್ರೀಯರಿಗೆ ಒದಗಿಸಿದೆ ಎಂದು ಹೇಳಬಹುದಾಗಿದೆ. ಎನ್ನುವ ಚಮ ಪಾವತಿಯವರ ಮಾತು ಗಮನಿಸುವಂಥದ್ದು(ಹೊಸ ಉದ್ಯೋಗಾವಕಾಶ ಗಳಲ್ಲಿನ ಮಹಿಳೆ ಪುಟ,೫) ಎಂ.ಎಸ್ ಆಶಾದೇವಿಯವರ 'ಉತ್ತಮ ಸರಕಿದು ಅತಿ ಲಾಭ ಬರುವಂತ..' ಎನ್ನುವ ಲೇಖನವು ಇದನ್ನೇ ಅನೇಕ ಹಂತಗಳಲ್ಲಿ ಗುರುತಿಸಲು ಬಯಸುತ್ತದೆ.ಮೊದಲಲ್ಲಿ ಜಾಗತೀಕರಣವು ಸ್ತ್ರೀಯರಿಗೆ ಸಹಾಯಕಾರಿ ಎನ್ನುವ ಭಾವನೆ ಮೂಡಿಸಿದ್ದು ನಿಜ.ಆದರೆ 'ಯಾವ ಜಾಗತೀಕರಣ ವಿಮೋಚನೆಯ ದಾರಿಯಾಗಿ ಕಂಡಿತ್ತೋ ಅದೇ ಜಾಗತೀಕರಣ ಇನ್ನು ತೀವ್ರವಾದ ಜಟಿಲವಾದ ಬಿಡಿಸಲು ಬಾರದ ಕಗ್ಗಂಟಾಗಿ ಕಾಣಿಸ ತೊಡಗಿದ್ದು ಅದರ ಮುಂದುವರಿದ ಘಟ್ಟದಲ್ಲಿ ಬದಲಾವಣೆಯ ಹರಿಕಾರ ಹಾಗೆ, ಮಾರ್ಗದರ್ಶಿಯ ಹಾಗೆ, ಸ್ನೇಹಿತನ ಹಾಗೆ ಕಾಣಿಸ ತೊಡಗಿತು..! ಇದು ಹೆಣ್ಣಿನ ಮಟ್ಟಿಗೆ ಮಾತ್ರವಲ್ಲ ಸಂಸ್ಕೃತಿಯ ಅನನ್ಯತೆ ವ್ಯವಸ್ಥೆಯ ಸ್ವಾವಲಂಬನೆ, ಸಮಾಜದ ಸ್ವಾಸ್ಥ್ಯ ಹೀಗೆ ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಜಾಗತೀಕರಣ ಪ್ರಭಾವ ಬೀರಿದಂತೆ ಕಾಣತೊಡಗಿತು.

## ಗ್ರಂಥ ಋಣ


1. "ಜಾಗತೀಕರಣಕ್ಕೆ ಮಹಿಳೆಯರ ಪ್ರತಿಕ್ರಿಯೆ"- ಆರ್ ತಾರಿಣಿ ಶುಭದಾಯಿನಿ ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಸಮಪುಟ ೭ ವಿಚಾರ ಸಾಹಿತ್ಯ ಸಂಪಾದಕರು: ಆರ್.ತಾರಿಣಿ ಶುಭದಾಯಿನಿ, ಪ್ರಧಾನ ಸಂಪಾದಕರು: ಡಾ,ವಿಜಯಶ್ರೀ ಸಬರದ, ಪ್ರಸರಾಂಗ ಕ.ರಾ.ಮ.ವಿ.ವಿ. ವಿಜಾಪುರ-೨೦೧೩
2. "ಜಾಗತೀಕರಣ ಮತ್ತು ಮಹಿಳಾ ಚಿಂತನೆ" -ಡಾ.ಕೆ.ಬಿ ಸರಸ್ವತಿ ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂಪುಟ-೬ ಸಾಹಿತ್ಯ ವಿಮರ್ಶೆ ಸಂಪಾದಕರು: ಡಾ,ವಿಜಯಶ್ರೀ ಸಬರದ ಪ್ರಸರಾಂಗ ಕ.ರಾ.ಮ.ವಿ.ವಿ ವಿಜಾಪುರ-೨೦೧೩
3. "ಆಧುನೀಕರಣ ಮತ್ತು ಮಹಿಳೆ" - ಅರವಿಂದ ಚೊಕ್ಕಾಡಿ.